**<u>ಅಸಲು ದಾವಾ ಸಂಖ್ಯೆ - 199/2019</u>** ಪಿ.ಡಬ್ಲ್ಯೂ:-1

ದಿನಾಂಕಃ **05-06-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>**

ವಾದಿ ನನ್ನ ತಾಯಿ. ಅವರು ಬೆಂಗಳೂರಿನ ಮಾದನಾಯಕನಹಳ್ಳಿಯಲ್ಲಿ 2007 ರಿಂದ ವಾಸವಾಗಿದ್ದಾರೆ. ಅದಕ್ಕೂ ಮೊದಲು ಅವರು 5-6 ವರ್ಷ ನ್ಯಾಮತಿ ತಾಲ್ಲೂಕಿನ ಗುಡ್ಡೇಹಳ್ಳಿಯಲ್ಲಿ ವಾಸವಾಗಿದ್ದರು. ನನಗೆ ಈಗ 31 ವರ್ಷ ವಯಸ್ಸು. ಕಳೆದ 31 ವರ್ಷಗಳಿಂದ ವಾದಿಯು, 1 ನೇ ಪ್ರತಿವಾದಿಯ ಸಂಪರ್ಕದಲ್ಲಿ ಇರಲಿಲ್ಲ. ಪುನಃ ಸಾಕ್ಷಿಯು ಮುಂದುವರೆದು ಸಂಪರ್ಕದಲ್ಲಿ ಇದ್ದರು ಎಂದು ಉತ್ತರಿಸಿರುತ್ತಾರೆ. ವಾದಿಯು ಸುಂಕದಕಟ್ಟೆಯಲ್ಲಿ ವಾಸವಾಗಿದ್ದಾಗ 1 ನೇ ಪ್ರತಿವಾದಿಯು ಆಗಾಗ್ಗೆ ಬಂದು ಹೋಗುತ್ತಿದ್ದರು. ಗುಡ್ಡೇಹಳ್ಳಿಯಲ್ಲಿ ವಾಸಿಸುವುದಕ್ಕಿಂತ ಮೊದಲು ನನ್ನ ತಾಯಿಯು ಸುಂಕದಕಟ್ಟೆಯಲ್ಲಿ ವಾಸವಾಗಿದ್ದರು. ಅವರು 2000 ನೇ ಇಸವಿಯವರೆಗೂ ಸುಂಕದಕಟ್ಟೆಯಲ್ಲಿ ವಾಸವಾಗಿದ್ದರು. ಎಷ್ಟು ವರ್ಷಗಳವರೆಗೆ ನನ್ನ ತಾಯಿ ಸುಂಕದಕಟ್ಟೆಯಲ್ಲಿ ವಾಸವಾಗಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ತಾಯಿಗೆ ಈಗ 51 ವರ್ಷ ವಯಸ್ಸಾಗಿದೆ. ನನ್ನ ತಾಯಿಗೆ 20 ವರ್ಷ ವಯಸ್ಸಾಗಿದ್ದಾಗಿನಿಂದಲೂ ಅವರು ಕುಲಗಟ್ಟೆಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸಹೋದರಿಯರ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. 1 ನೇ ಪ್ರತಿವಾದಿಯ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರ ಬಗ್ಗೆ ನನಗೆ ಅಷ್ಟಗಿ ಮಾಹಿತಿ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**